ಸಾಕ್ಷಿಯನ್ನು ದಿ: 04.08.2026 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-2

**ಪಾಟೀಸವಾಲುಃ- ಆರೋಪಿ ಪರ ವಕೀಲರಿಂದ:-**

1. ಈ ಪ್ರಕರಣವನ್ನು ನನ್ನ ಅಜ್ಜಿ ಸಲ್ಲಿಸಿರುತ್ತಾರೆ. ಈ ಪ್ರಕರಣವನ್ನು ನನ್ನ ಅಜ್ಜಿ ಖುದ್ದಾಗಿ ಸಲ್ಲಿಸಿರುತ್ತಾರೆ. ಮಹೇಶ ಸುಳ್ಳದ ಫಿರ್ಯಾದುದಾರಳ ಮಗ ಇರುತ್ತಾನೆ. ಮಹೇಶ ಸುಳ್ಳದನಿಗೆ ಫಿರ್ಯಾದಿ ಈ ಹಿಂದೆ ಜಿ ಪಿ ಎ ಕೊಟ್ಟಿದ್ದರು. ಮಹೇಶ ಸುಳ್ಳದನಿಗೆ ಕೊಟ್ಟ ಜಿ ಪಿ ಎ ಈಗ ರದ್ದಾಗಿರುತ್ತದೆ. ಜಿ ಪಿ ಎ ರದ್ದಾದ ಕುರಿತು ದಾಖಲಾತಿ ಇರುತ್ತದೆ. ಜಿ ಪಿ ಎ ರದ್ದಾದ ಕುರಿತು ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಿಪಿ-7 ರಲ್ಲಿ ನಿಪಿ-1 ಅನ್ನು ರದ್ದು ಮಾಡಿದ ಕುರಿತು ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ-7 ಅನ್ನು ಹೊರತು ಪಡಿಸಿ ನಿಪಿ-1 ಅನ್ನು ರದ್ದು ಪಡಿಸಲಾಗಿದೆ ಎಂದು ತೋರಿಸಲು ನನ್ನ ಹತ್ತಿರ ದಾಖಲಾತಿ ಇಲ್ಲ ಎಂದರೆ ಸರಿ. ನಾನು ಹಾಜರು ಪಡಿಸಿದ ದಾಖಲಾತಿ ಹೊರತು ಪಡಿಸಿ ಈ ಪ್ರಕರಣದ ಕುರಿತು ಬೇರೆ ಯಾವ ದಾಖಲಾತಿ ಇರುವುದಿಲ್ಲ.
2. ನನ್ನ ಅಜ್ಜಿ ಆರೋಪಿಗೆ ಫೆಬ್ರುವರಿ 2024 ರಲ್ಲಿ ಚೆಕ್ ಮುಖಾಂತರ ಹಣ ಕೊಟ್ಟಿದ್ದರು. ಸದರಿ ಹಣವನ್ನು ಹಂತ ಹಂತವಾಗಿ ಕೊಟ್ಟಿರುತ್ತಾರೆ. ನನ್ನ ಅಜ್ಜಿ ಆರೋಪಿಗೆ ಹಣ ಕೊಡುವ ಸಮಯದಲ್ಲಿ ನಾನು ಸಹ ಇದ್ದೇನು. ಕೈಗಡ ಕರಾರು ಪತ್ರ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಕೈ ಗಡ ಕರಾರು ಪತ್ರ ಯಾವ ದಿನಾಂಕದಂದು ಬರೆಯಲಾಗಿದೆ ಗೊತ್ತಿಲ್ಲ. ಆರೋಪಿ ಯಾವುದೇ ಕೈ ಗಡ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ 2 ಲಕ್ಷ 45 ಸಾವಿರ ಹಣವನ್ನು ದಿಃ 12-02-2021 ರಂದು ಆರೋಪಿಗೆ ನಗದು ರೂಪದಲ್ಲಿ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಫಿರ್ಯಾದಿ ಮಧ್ಯೆ ನಡೆದ ವ್ಯವಹಾರದಲ್ಲಿ ನಾನು ಭಾಗಿಯಾಗಿರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ದಾಖಲು ಮಾಡುವ ಮೊದಲು ಆರೋಪಿಗೆ ಪೆಬ್ರುವರಿ 2024 ರಲ್ಲಿ ನನ್ನ ಅಜ್ಜಿ ನೋಟಿಸ ಕೊಟ್ಟಿರುತ್ತಾರೆ. ಸದರಿ ನೋಟಿಸ ಅನ್ನು ಬಳಿಗಾರ ವಕೀಲರ ಮೂಲಕ ಕೊಡಿಸಿರುತ್ತಾರೆ.
3. ಆರೋಪಿ ಹೆಸರು ಎಚ ಎಸ ವಿಶ್ವನಾಥ. ಸಾಕ್ಷಿಗೆ ದಿಃ 15-04-2024 ರ ಪ್ರತ್ಯುತ್ತರ ನೋಟಿಸ ಹಾಗೂ ಅಂಚೆ ಸ್ವೀಕೃತಿ ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ

ಕಾರಣ ಅವುಗಳನ್ನು ನಿಡಿ–1 ಮತ್ತು 2 ಎಂದು ಗುರುತಿಸಲಾಯಿತು. ನಿಡಿ–1 ರ ನೋಟಿಸ ಅನ್ನು ಆರೋಪಿ ನಿಪಿ–4 ಕ್ಕೆ ಪ್ರತ್ಯುತ್ತರವಾಗಿ ಕೊಟ್ಟಿರುತ್ತಾರೆ ಎಂದರೆ ಸರಿ. ನಿಡಿ–1 ರ ಪ್ರತಿ ನಾನು ಹಾಜರು ಪಡಿಸಿಲ್ಲ ಎಂದರೆ ಸರಿ. ನನ್ನ ಅಜ್ಜಿ ಬಡ್ಡಿ ವ್ಯವಹಾರ ಮಾಡುವುದಿಲ್ಲ. ನನ್ನ ಅಜ್ಜಿ ಆಕೆಯ ಮಗ ಮಹೇಶನ ಜೊತೆ ಸೇರಿ ಬಡ್ಡಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. 2011 ರಲ್ಲಿ ನನ್ನ ಅಜ್ಜಿ ಆರೋಪಿಗೆ 8 ಲಕ್ಷ ಹಣ ಚೆಕ ಮುಖಾಂತರ ಕೊಟ್ಟು, ಆರೋಪಿ ಕಡೆಯಿಂದ 2 ಲಕ್ಷ ಹಣವನ್ನು ನಗದು ರೂಪದಲ್ಲಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. 2011 ರಲ್ಲಿ ಹಣ ಕೊಡುವಾಗ ನನ್ನ ಅಜ್ಜಿ ಸಹಿ ಮಾಡಿದ ಖಾಲಿ ಬಾಂಡ ಹಾಗೂ ಚೆಕ ಅನ್ನು ಆರೋಪಿಯಿಂದ ಪಡೆದಿದ್ದರೂ ಎಂದರೆ ಗೊತ್ತಿಲ್ಲ. ನನ್ನ ಅಜ್ಜಿಯಿಂದ ಪಡೆದ ಹಣವನ್ನು ಆರೋಪಿ ಪ್ರತಿ ತಿಂಗಳು ಫೋನ ಪೇ ಮುಖಾಂತರ ಹಣ ವಾಪಸ್ಸು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಫೋನ ಪೇ ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಫಿರ್ಯಾದಿ ಮಗ ಮಹೇಶನಿಗೆ ಸದರಿ ಹಣ ಕೊಟ್ಟು ತಿರಿಸಿರುತ್ತಾರೆ ಎಂದರೆ ಸರಿಯಲ್ಲ.

4. ಸಾಕ್ಷಿಗೆ 4 ಖಾಲಿ ಬಾಂಡ ಜರಾಕ್ಸ ಪ್ರತಿಗಳು ಹಾಗೂ ಚೆಕಗಳ 5 ಜರಾಕ್ಸ ಪ್ರತಿಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ನಿಡಿ–3 ರಿಂದ 11 ಎಂದು ಗುರುತಿಸಲಾಯಿತು. 2011 ರಲ್ಲಿ ನನ್ನ ಅಜ್ಜಿ ಆರೋಪಿಗೆ ಸಾಲ ಕೊಡುವಾಗ ಆರೋಪಿಯಿಂದ ನಿಡಿ–3 ರಿಂದ 5 ರ ಬಾಂಡ ಹಾಗೂ ಚೆಕಗಳನ್ನು ಭದ್ರತೆಗೆ ಪಡೆದಿದ್ದರೂ ಎಂದರೆ ಸರಿ. 2011ರ ಹಣವನ್ನು ಆರೋಪಿ ವಾಪಸ್ಸು ಕೊಟ್ಟಿದ್ದರೂ ಸಹ ನನ್ನ ಅಜ್ಜಿ ಬಡ್ಡಿ ಹಣಕ್ಕೆ ಸಂಬಂಧಿಸಿದಂತೆ ನಿಡಿ–6 ರಿಂದ 11 ಅನ್ನು ಆರೋಪಿಯಿಂದ ಪಡೆದಿದ್ದರೂ ಎಂದರೆ ಸಾಕ್ಷಿಯು ಅವುಗಳನ್ನು ಭದ್ರತೆಗಾಗಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಆರೋಪಿ ಯಾವುದೇ ಹಣ ವಾಪಸ್ಸು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. 2011 ರ ನಂತರ ನನ್ನ ಅಜ್ಜಿ ಆರೋಪಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿಪಿ–2 ಅನ್ನು ಕೊಡುವ 2 ತಿಂಗಳು ಮುಂಚೆ ನನ್ನ ಅಜ್ಜಿ ಆರೋಪಿಗೆ ಹಣ ಪಾವತಿ ಮಾಡಿರುತ್ತಾರೆ. 2011 ರ ನಂತರ ನನ್ನ ಅಜ್ಜಿ ಆರೋಪಿಗೆ ಹಣ ಕೊಟ್ಟ ಬಗ್ಗೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ.

5. ನನ್ನ ಮಾವ ಮಹೇಶನ ಮೊಬೈಲ್ ನಂಬರ 988073999 ಇರುತ್ತದೆ. ಸಾಕ್ಷಿಗೆ 31 ಪುಟಗಳ ವಾಟ್ಸ ಆಪ್ ಚಾಟ್ಸನ ಜರಾಕ್ಸ ಪ್ರತಿಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ಒಟ್ಟಾಗಿ ನಿಡಿ–12 ಎಂದು ಗುರುತಿಸಲಾಯಿತು. ನನ್ನ ಅಜ್ಜಿ ಆರೋಪಿಗೆ ಕೊಟ್ಟ ಹಣವನ್ನು ಆರೋಪಿಯು ನನ್ನ ಅಜ್ಜಿಯ ಮಗನಾದ ಮಹೇಶನಿಗೆ 2014 ರಲ್ಲಿ ಹಂತ ಹಂತವಾಗಿ ಪ್ರತಿ ತಿಂಗಳು ಒಟ್ಟು 16 ಲಕ್ಷ 52 ಸಾವಿರ ಹಣವನ್ನು ಕೊಟ್ಟ ಸದರಿ ಸಾಲವನ್ನು ತಿರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಎಲ್ಲಾ ಹಣವನ್ನು ವಾಪಸ್ಸು ಕೊಟ್ಟಿದ್ದರೂ ಸಹ ಇನ್ನೂ 10 ಲಕ್ಷ 45 ಸಾವಿರ ಅಸಲು ಕೊಡಬೇಕು ಎಂದು 2024 ರಲ್ಲಿ ಆರೋಪಿಯನ್ನು ನನ್ನ ಅಜ್ಜಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ತನ್ನ ಕಷ್ಟ ಹೇಳಿಕೊಂಡರು ಸಹ ನನ್ನ ಅಜ್ಜಿ ಮತ್ತು ಮಾವ ಅದನ್ನು ಕೇಳಲಿಲ್ಲ ಎಂದರೆ ಸರಿಯಲ್ಲ. ಆರೋಪಿ ತಾನು ಭದ್ರತೆಗೆ ಕೊಟ್ಟ ಖಾಲಿ ಬಾಂಡ ಮತ್ತು ಖಾಲಿ ಚೆಕ ಅನ್ನು ವಾಪಸ್ಸು ಕೊಡುವಂತೆ ಕೇಳಿದರೂ ಸಹ ನನ್ನ ಅಜ್ಜಿ ವಾಪಸ್ಸು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ ಮತ್ತು ಮಾವ ಆರೋಪಿಗೆ 16 ಲಕ್ಷಕ್ಕೆ ಕರಾರು ಪತ್ರ ಬರೆದುಕೊಡುವಂತೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಬಾಂಡ ಬರೆದುಕೊಡುವ ಕುರಿತು ಒಂದು ಬರವಣಿಗೆ ಪ್ರತಿಯನ್ನು ಸಹ ಆರೋಪಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಸದರಿ ವಿಚಾರವನ್ನು ಶಿವಾನಂದ ಮುತ್ತಣ್ಣವರ ಎದುರಿಗೆ ತಿಳಿಸಿದಾಗ ಅವರು ನನ್ನ ಮಾವ ಹಾಗೂ ಆರೋಪಿಯನ್ನು ಕರೆಸಿ ತೀರ್ಮಾಣ ಮಾಡಿಕೊಳ್ಳಿ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಶಿವಾನಂದ ಮುತ್ತಣ್ಣವನರ ನನ್ನ ಮಾವನಿಗೆ 8 ಲಕ್ಷ ಹಣಕ್ಕೆ 16 ಲಕ್ಷ ತೆಗೆದುಕೊಂಡಿದ್ದೀರಿ ಇನ್ನೂ ಎನು ಕೊಡಬೇಕು ಎಂದು ಬುದ್ದಿ ವಾದ ಹೇಳಿರುತ್ತಾರೆ ಎಂದರೆ ಗೊತ್ತಿಲ್ಲ. ದಿಃ 15–02–2021 ರಂದು ಆರೋಪಿ ಕೊಟ್ಟಂತಹ ಒಂದು ಚೆಕ ಅನ್ನು ನನ್ನ ಅಜ್ಜಿ ದುರ್ಬಳಕೆ ಮಾಡಿಕೊಂಡು ಈ ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ.

6. ಸಾಕ್ಷಿಗೆ ಆರೋಪಿಯ ಚೆಕ ಪುಸ್ತಕದ ಕೌಂಟರ ಫೈಲಗಳು ಇರುವ ಪುಸ್ತಕ ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ಒಟ್ಟಾಗಿ ನಿಡಿ–13 ಎಂದು ಗುರುತಿಸಲಾಯಿತು. ನಿಪಿ–2 ರ ಚೆಕ ಸಂಖ್ಯೇ ಹೇಳಲು ಬರುವುದಿಲ್ಲ. ನಿಪಿ–2 ರ ಚೆಕ ಸಂಖ್ಯೇಃ 989830 ಇರುತ್ತದೆ ಎಂದರೆ ಸರಿ. ನಿಡಿ–13 ರ ಕೌಂಟರ ಫೈಲನಲ್ಲಿ ಚೆಕ ಸಂಖ್ಯೇಃ

989830 ದಿಃ 15-02-2021 ಎಂದು ಬರೆಯಲಾಗಿದೆ ಎಂದರೆ ಸರಿ. ದಿಃ 15-02-2021 ರಂದು ಆರೋಪಿಯಿಂದ ಖಾಲಿ ಚೆಕ ಹಾಗೂ ಖಾಲಿ ಬಾಂಡ ಅನ್ನು ನನ್ನ ಅಜ್ಜಿ ಭದ್ರತೆಗಾಗಿ ಪಡೆದು ಅವುಗಳನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಫಿರ್ಯಾದಿನಲ್ಲಿ ತಿಳಿಸಿರುವ ಹಾಗೇ ಆರೋಪಿ ಹಣ ಪಡೆದಿಲ್ಲ ಮತ್ತು ಅದರ ತಿರುವಳಿಗಾಗಿ ನಿಪಿ-2 ಅನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. 2021 ರಲ್ಲಿ ಆರೋಪಿಯಿಂದ ಪಡೆದ ಖಾಲಿ ಚೆಕ ಅನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

7. ಸಾಕ್ಷಿಗೆ ಒಂದು ದೂರಿನ ಪ್ರತಿ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಡಿ-14 ಎಂದು ಗುರುತಿಸಲಾಯಿತು. ನಿಡಿ-14 ಅನ್ನು ಆರೋಪಿ ನನ್ನ ಅಜ್ಜಿ ಹಾಗೂ ನನ್ನ ಮಾವನ ವಿರುದ್ದ ಖಾಲಿ ಚೆಕಗಳು ಹಾಗೂ ಬಾಂಡಗಳನ್ನು ವಾಪಸ್ಸು ಕೊಡುತ್ತಿಲ್ಲ ಎಂದು ಘಂಟಿಕೇರಿ ಪೋಲಿಸ ಠಾಣೆಗೆ ದೂರನ್ನು ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ನಿಡಿ-14 ರ ದೂರನ್ನು ಪರಿಗಣಿಸದಂತೆ ನನ್ನ ಅಜ್ಜಿ ಹಾಗೂ ಮಾವ ಪೋಲಿಸರಿಗೆ ಪ್ರಭಾವ ಬೀರಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ

**ಜೆ.ಎಂ.ಎಫ್.ಸಿ-1 ನೇ ನ್ಯಾಯಾಲಯ, ಹುಬ್ಬಳ್ಳಿ**